# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಆರೋಗ್ಯ ವೈದ್ಯಾಧಿಕಾರಿ (ಗಾಂಧಿನಗರ) ವಲಯ ರವರ ಕಛೇರಿ,

**I. ಆರೋಗ್ಯ ವೈದ್ಯಾಧಿಕಾರಿ, (ಗಾಂಧಿನಗರ )ವಲಯ ಕಛೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು:-**

ಅ) ಕಛೇರಿಯ ಹೆಸರು: ಆರೋಗ್ಯ ವೈದ್ಯಾಧಿಕಾರಿ (ಗಾಂಧಿನಗರ) ವಲಯ, ಟ್ಯಾಂಕ್‌ಬಂಡ್ ರಸ್ತೆ, ಉಪ್ಪಾರಪೇಟೆ ಪೋಲೀಸ್ ಠಾಣೆ ಹತ್ತಿರ, ಗಾಂಧಿನಗರ, ಬೆಂಗಳೂರು- 560009

ಆ) ರಚನೆ:

ಜಂಟಿ ಆಯುಕ್ತರು (ಪಶ್ಚಿಮ)

↓

ಆರೋಗ್ಯಾಧಿಕಾರಿ (ಪಶ್ಚಿಮ)

↓

ಆರೋಗ್ಯ ವೈದ್ಯಾಧಿಕಾರಿ (ಗಾಂಧಿನಗರ) ವಲಯ

↓

1. ಹಿರಿಯ ಆರೋಗ್ಯ ಪರಿವೀಕ್ಷರು – 4
2. ಕಿರಿಯ ಆರೋಗ್ಯ ಪರಿವೀಕ್ಷಕರು -1
3. ದ್ವಿತೀಯ ದರ್ಜೆ ಸಹಾಯಕರು -2
4. ಉಪನೋಂದಣೀಗಾರರು - 5
5. ವ್ಯಾಕ್ಸಿನೇಟರ್ -1
6. ಎ.ಎನ್.ಎಂ. -1
7. ಜವಾನರು -2
8. ಡಿ.ಜಿ.ಎಂ. -1
9. ಬಿ.ಜಿ.ಎಂ. -1
10. ಎಂ.ಸಿ.ಗ್ಯಾಂಗ್‌ಮ್ಯಾನ್ -3
11. ಡಿಗ್ಗರ್ಸ್ -2

ಇ) ಕಾರ್ಯಗಳು ಮತ್ತು ಕರ್ತವ್ಯಗಳು:-

ಗಾಂಧಿನಗರ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಪಶ್ಚಿಮ) ವಲಯದ ವ್ಯಾಪ್ತಿಗೆ ಬರುತ್ತದೆ. ಆರೋಗ್ಯ ವೈದ್ಯಾಧಿಕಾರಿಯವರು ವಲಯ ವ್ಯಾಪ್ತಿಯ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಪಟ್ಟ ಕೆಲಸ ಕಾರ್ಯಗಳ ಮೇಲ್ವಿಚಾರಕರಾಗಿರುತ್ತಾರೆ.

ಇವರ ಅಧೀನದಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರು, ಕಛೇರಿ ಸಿಬ್ಬಂದಿ ಮತ್ತು ಎಂ.ಸಿ.ಗ್ಯಾಂಗ್‌ಮ್ಯಾನಗಳು ನಿರ್ವಹಿಸುತ್ತಿರುತ್ತಾರೆ. ಇವರ ಸಹಕಾರದೊಂದಿಗೆ ವಲಯದ ದೈನಂದಿನ ಕೆಲಸಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ

ಈ ವಲಯದಲ್ಲಿ 06, 25, 26 ಮತ್ತು 27 ನಾಲ್ಕು ವಾರ್ಡ್‌ಗಳಿದ್ದು, ಇವುಗಳನ್ನು 06/ಎ, 06/ಬಿ, 25/ಎ, 25/ಬಿ, 26/ಎ, 26/ಬಿ, 27/ಎ, 27/ಬಿ, 27/ಸಿ, 27/ಡಿ ಮತ್ತು 27/ಇ ಗಳೆಂದು ಆರೋಗ್ಯ ವಾರ್ಡ್‌ಗಳಾಗಿ ವಿಂಗಡಿಸಲಾಗಿದೆ.

ವಲಯದ ವ್ಯಾಪ್ತಿಯಲ್ಲಿ ಬರುವ ಅತಿಥಿ ಗೃಹ, ಬೋರ್ಡಿಂಗ್ಸ್, ಲಾಡ್ಜ್, ರಿಫ್ರೇಷ್‌ಮೆಂಟ್, ಈಟಿಂಗ್ ಹೌಸ್, ರೆಸ್ಟೋರೆಂಟ್, ಕ್ಯಾಂಟೀನ್, ಹೋಟೇಲ್, ಬೇಕರಿ, ಸಿಹಿತಿಂಡಿಗಳ ಮಾರಾಟದ ಅಂಗಡಿಗಳು, ಸಿಹಿ ಪಾನೀಯ ಅಂಗಡಿಗಳು, ಚಿಕನ್ ಮತ್ತ ಮಟನ್ ಮಾರಾಟದ ಅಂಗಡಿಗಳು, ಇತರೆ ತಿನ್ನುವ ಪದಾರ್ಥಗಳ ಉದ್ದಿಮೆಗಳಲ್ಲಿ ಸಾರ್ವಜನಿಕರ ಆರೋಗ್ಯಕ್ಕೆ ತೊಂದರೆ ಉಂಟು ಮಾಡುವಂತಹ ಆಹಾರ ಪದಾರ್ಥಗಳ ತಯಾರಿಕೆ ಮತ್ತು ಮಾರಾಟವನ್ನು ನಿರ್ಬಂಧಿಸಿ, ಅವುಗಳಿಗೆ ಪರವಾನಗಿ ನೀಡಿ, ನಿಯಂತ್ರಿಸಲಾಗುತ್ತದೆ ಹಾಗೂ ಲಘು ಕೈಗಾರಿಕೆಗಳಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿರ್ಬಂಧಗಳನ್ನು ವಿಧಿಸಿ, ನಡೆಸಲು ವಿದ್ಯುತ್ ಸಂಪರ್ಕ ಪಡೆದುಕೊಳ್ಳಲು ಪರವಾನಗಿ ನೀಡಲಾಗುತ್ತದೆ.

ವಲಯದ ವ್ಯಾಪ್ತಿಯಲ್ಲಿ ಬರುವಂತಹ ಉದ್ದಿಮೆಗಳಲ್ಲಿ ಕೆಲಸ ನಿರ್ವಹಿಸುವ ನೌಕರರ ವಾರ್ಷಿಕ ಆರೋಗ್ಯ ತಪಾಸಣೆ ಬಗ್ಗೆ ಸಂಬಂಧಪಟ್ಟವರಿಗೆ ಸೂಕ್ತ ಮಾರ್ಗದರ್ಶನ ನೀಡುವುದಲ್ಲದೆ, ನೌಕರರಿಗೆ ಆರೋಗ್ಯ ತಪಾಸಣೆ ಮಾಡಿರುವ ದೃಢೀಕರಣ ಪತ್ರವನ್ನು ಸಹಾ ನೀಡಲಾಗುತ್ತದೆ ಮತ್ತು ಉದ್ದಿಮೆಗಳ ಸ್ಥಳವನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಉದ್ದಿಮೆದಾರರಿಗೆ ಸ್ಪಷ್ಟ ಸೂಚನೆಯನ್ನು ನೀಡಿ, ಆ ಬಗ್ಗೆ ಕೂಡಾ ಆಗಿಂದಾಗ್ಗೆ ಪರಿಶೀಲನೆ ಕೈಗೊಳ್ಳಲಾಗುತ್ತಿದೆ.

ಸಾಂಕ್ರಮಿಕ ರೋಗಗಳನ್ನು ತಡೆಗಟ್ಟಲು ಮುನ್ನೇಚ್ಚರಿಕೆ ಕ್ರಮಗಳು ಕೈಗೊಂಡು ವಲಯದ ವ್ಯಾಪ್ತಿಯ ಪ್ರದೇಶಗಳಲ್ಲಿ ಸೊಳ್ಳೆ ಔಷಧಿ ಸಿಂಪಡಣೆ, ಫಾಗಿಂಗ್ ಮಾಡುವುದು, ಸೊಳ್ಳೆ ಉತ್ಪತ್ತಿಯಾಗುವ ತಾಣಗಳನ್ನು ನಾಶಪಡಿಸುವುದು. ಸಾಂಕ್ರಮಿಕ ರೋಗಗಳ ಬಗ್ಗೆ ಕರಪತ್ರ ಮತ್ತು ಇತರೆ ಮಾಹಿತಿ ಪುಸ್ತಕಗಳನ್ನು ವಿತರಿಸಿ, ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸಿ, ರೋಗಗಳು ಹರಡದಂತೆ ಮುಂಜಾಗ್ರತೆ ವಹಿಸಲಾಗುತ್ತದೆ.

ಗಾಂಧಿನಗರ ವಲಯ ವ್ಯಾಪ್ತಿಗೆ ಬರುವ ಜನನ ಮತ್ತು ಮರಣಗಳಿಗೆ ಸಂಬಂಧಿಸಿದಂತೆ ಜನನ ಮತ್ತು ಮರಣ ಪ್ರಮಾಣ ಪತ್ರಗಳನ್ನು ನೀಡಲಾಗುತ್ತದೆ.

ವಲಯದ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳ ನೀರಿನ ಮಾದರಿಗಳನ್ನು ಆಗಿಂದಾಗ್ಗೆ ಪ್ರಯೋಗಾಲದ ಪರೀಕ್ಷೆಗೆ ಕಳುಹಿಸಿ, ವರದಿಗಳನ್ನು ಪಡೆದು, ಕ್ರಮ ಕೈಗೊಳ್ಳುವ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.

**II. ಅಧಿಕಾರಿ ಮತ್ತು ಸಿಬ್ಬಂದಿಗಳ ಕರ್ತವ್ಯಗಳು:-**

1. **ಡಾ.||ಎ.ಬಿ.ನಂಜುಂಡ ರಾಜೇ ಅರಸ್, ಆರೋಗ್ಯ ವೈದ್ಯಾಧಿಕಾರಿ:-** ಇವರು ಗಾಂಧಿನಗರ ವಲಯ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ನಿಯಮಗಳಡಿ ಪ್ರದತ್ತವಾದ ಎಲ್ಲಾ ಅಧಿಕಾರಿಗಳನ್ನು ಹೊಂದಿರುತ್ತಾರೆ. ಕಛೇರಿ ಮೇಲ್ವಿಚಾರಣೆ ಮತ್ತು ನಿಯಂತ್ರಣ ಅಧಿಕಾರವನ್ನು ಹೊಂದಿರುತ್ತಾರೆ.

2. **ಹಿರಿಯ ಆರೋಗ್ಯ ಪರಿವೀಕ್ಷಕರು**:–

1. ಶ್ರೀ.ತಿಮ್ಮೇಗೌಡ – ವಾರ್ಡ್ 06
2. ಶ್ರೀ.ರಾಮಣ್ಣ – ವಾರ್ಡ್ 25
3. ಶ್ರೀ.ಎನ್.ಶಂಕರ್ – ವಾರ್ಡ್ 26
4. ಶ್ರೀ.ರಾಜಣ್ಣ – ವಾರ್ಡ್ 27

ಹಿರಿಯ ಆರೋಗ್ಯ ಪರಿವೀಕ್ಷಕರು ತಮ್ಮ ತಮ್ಮ ವಾರ್ಡ್‌ಗಳ ವ್ಯಾಪ್ತಿಯ ಪ್ರದೇಶದಲ್ಲಿರುವ ಉದ್ದಿಮೆಗಳು ಪರವಾನಗಿ ಪಡೆದು, ಪಾಲಿಕೆಯ ನಿಯಮಗಳಾನುಸಾರ ಉದ್ದಿಮೆಯನ್ನು ನಡೆಸುತ್ತಿರುವ ಬಗ್ಗೆ ಪರಿಶೀಲಿಸುತ್ತಿರುವುದಲ್ಲದೆ ಸಾರ್ವಜನಿಕರಿಂದ ಉದ್ದಿಮೆಗಳ ಬಗ್ಗೆ ಬರುವ ದೂರುಗಳನ್ನು ಕಾಲ ಕಾಲಕ್ಕೆ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳಿಗೆ ವರದಿ ಮಾಡುತ್ತಾರೆ ಮತ್ತು ಪರಾವನಗಿ ಪಡೆಯದೇ ಅನಧಿಕೃತವಾಗಿ ನಡೆಸುವ ಉದ್ದಿಮೆಗಳಿಗೆ ನೋಟೀಸ್ ಜಾರಿ, ಮಾಡಿ ಉದ್ದಿಮೆಯನ್ನು ಮುಚ್ಚಲು ಮೇಲಾಧಿಕಾರಿಗಳಿಗೆ ವರದಿ ಮಾಡುತ್ತಾರೆ ಹಾಗೂ ವಾರ್ಡ್ ಸ್ವಚ್ಛತಾ ಕೆಲಸ ಕಾರ್ಯಗಳ ಮೇಲುಸ್ತುವಾರಿ ನೋಡಿಕೊಳುತ್ತಾರೆ.

3. **ಶ್ರೀ.ಎನ್.ಸೀತಾರಾಮ್‌ರಾಜು, ಕಿ.ಆ.ಪ**:– ಇವರು ವಲಯದ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿ ಸಂಭವಿಸುವ ಸಾಂಕ್ರಮಿಕ ರೋಗಗಳ ವರದಿಗಳ ಬಗ್ಗೆ ಮಾಹಿತಿಯನ್ನು ಸಿದ್ಧಪಡಿಸಿ, ನಿಗದಿತ ನಮೂನೆಯಲ್ಲಿ ತಯಾರಿಸುವುದು ಮತ್ತು ವಲಯದ ವ್ಯಾಪ್ತಿಯ ಪ್ರದೇಶಗಳಲ್ಲಿ ನೀರಿನ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸುವುದು, ಪ್ರಯೋಗಾಲಯದಿಂದ ವರದಿ ಬಂದ ನಂತರ ಸಂಬಂಧಪಟ್ಟವರಿಗೆ ಮಾಹಿತಿ ನೀಡುವುದು ಮತ್ತು ಜನನ ಮತ್ತು ಮರಣ ನೋಂದಣಿ ಕಛೇರಿಯ ಮೇಲ್ವಿಚಾರಣೆಯನ್ನು ಮಾಡುವುದು.

4. **ಶ್ರೀ.ಜಿ.ಟಿ.ನಾಗರಾಜು, ದ್ವಿ.ದ.ಸ**.:– ವಾರ್ಡ್ 25ರ ಉದ್ಯಮ ಪರವಾನಗಿಯ ಡಿ.ಸಿ.ಬಿ. ನಿರ್ವಹಣೆ, ಕಛೇರಿಯ ದಾಸ್ತಾನುವಿಗೆ ಸಂಬಂಧಪಟ್ಟ ಕೆಲಸ ಕಾರ್ಯಗಳು, ಕಛೇರಿಗೆ ಬರುವ ಟಪಾಲು ಸ್ವೀಕೃತಿ ಕೆಲಸಗಳನ್ನು ನಿರ್ವಹಿಸುತ್ತಾರೆ.

5. **ಶ್ರೀ.ಕೆ.ಎ.ಓಬಳೇಶ್, ದ್ವಿ.ದ.ಸ**.:– ಇವರು ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿ–ನೌಕರರುಗಳ ವೇತನಕ್ಕೆ ಸಂಬಂಧಪಟ್ಟ ಕೆಲಸ ಕಾರ್ಯಗಳು ಮತ್ತು ಸೇವಾ ಪುಸ್ತಕದ ನಿರ್ವಹಣೆ, ವಾರ್ಡ್ 24 ಮತ್ತು 26 ಗಳ ಉದ್ಯಮ ಪರವಾನಗಿಗಳ ಡಿ.ಸಿ.ಬಿ. ನಿರ್ವಹಣೆಯನ್ನು ನಿರ್ವಹಿಸುತ್ತಾರೆ.

6. **ಉಪನೋಂದಣೀಗಾರರು**:–

1. **ಶ್ರೀ.ಕೆ.ಗಂಗಾಧರ್**:– ಇವರು ಜನನಗಳ ನೋಂದಣಿ, ಪ್ರಮಾಣ ಪತ್ರಗಳ ನೀಡಿಕೆ, ಶುಲ್ಕ ವಸೂಲಿ ಮಾಡುವ ಕಾರ್ಯವನ್ನು ನಿರ್ವಹಿಸುತ್ತಾರೆ.

2. **ಶ್ರೀ.ಟಿ.ವೆಂಕಟೇಶ್**:– ಇವರು ಇವರು 27ನೇ ವಾರ್ಡಿನ ಪರವಾನಗಿಯ ಡಿ.ಸಿ.ಬಿ. ಕೆಲಸ ಕಾರ್ಯಗಳು, ಮರಣಗಳ ನೊಂದಣಿ, ಪ್ರಮಾಣ ಪತ್ರಗಳ ನೀಡಿಕೆ, ಶುಲ್ಕ ವಸೂಲಿ ಮತ್ತು ವಸೂಲಾದ ಶುಲ್ಕವನ್ನು ಬ್ಯಾಂಕಿಗೆ ಜಮಾ ಮಾಡುವ ಕಾರ್ಯವನ್ನು ನಿರ್ವಹಿಸುತ್ತಾರೆ ಮತ್ತು ಪ್ರತಿ ತಿಂಗಳು ಜನನ ಮತ್ತು ಮರಣಗಳ ಮಾಸಿಕ ವರದಿಯನ್ನು ನಿಗದಿತ ನಮೂನೆಯಲ್ಲಿ ತಯಾರಿಸಿ, ಜಂಟಿ ನಿರ್ದೇಶಕರು (ಸಾಂಖ್ಯಿಕ) ರವರ ಕಛೇರಿಗೆ ಕಳುಹಿಸುತ್ತಾರೆ.

೩. **ಶ್ರೀ.ಜಿ.ಕೆ.ಕೃಪಾಶಂಕರ್**:– ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಬರುವ ಅರ್ಜಿಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ.

4. **ಶ್ರೀ.ಎಸ್.ಸೋಮಶೇಖರ್**: ಇವರು ಓ.ಓ.ಡಿ. ಮೇಲೆ ಇವರು ಆರೋಗ್ಯ ವೈದ್ಯಾಧಿಕಾರಿ (ಯಶವಂತಪುರ) ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

೫. **ಶ್ರೀ.ಬೈಲಪ್ಪ**:– ಇವರು ಓ.ಓ.ಡಿ. ಮೇಲೆ ಇವರು ಜಂಟಿ ನಿರ್ದೇಶಕರು (ಸಾಂಖ್ಯಿಕ)ರವರ ಕಛೇರಿ, ಮೆಯೋಹಾಲ್ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

7. **ಬಿ.ನಾಗರತ್ನ, ವ್ಯಾಕಿನೇಟರ್ ;** ಇವರು ಓ.ಓ.ಡಿ. ಮೇಲೆ ಆರೋಗ್ಯ ವೈದ್ಯಾಧಿಕಾರಿ (ಮಡಿವಾಳ) ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

8. **ಎಂ.ಮೋಹನಾ ಎ.ಎನ್.ಎಂ.**:– ಇವರು ಓ.ಓ.ಡಿ. ಮೇಲೆ ಆರೋಗ್ಯ ವೈದ್ಯಾಧಿಕಾರಿ (ಕೋರಮಂಗಲ) ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

9. **ಶ್ರೀಮತಿ ಜಯಶೀಲಮ್ಮ, ಶ್ರೀ.ಜಗನ್ನಾಥ್, ಜವಾನರು** :–ಇವರು ಕಛೇರಿಯಲ್ಲಿ ಅಧಿಕಾರಿ ಮತ್ತು ಸಿಬಂದಿವರ್ಗದವರು ಸೂಚಿಸುವ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ.

10. **ಇಗ್ನಾಸಪ್ಪ, ಡಿ.ಜಿ.ಎಂ**:– ಇವರು ಆರೋಗ್ಯಾಧಿಕಾರಿಗಳು (ಪೂರ್ವ) ರವರ ಕಚೇರಿಯಲ್ಲಿ ಓ.ಓ.ಡಿ. ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

11. **ಎಂ.ಮಹದೇವ, ಬಿ.ಜಿ.ಎಂ**:– ಇವರು ಶ್ರೀರಾಮಪುರ ರುಧ್ರಭೂಮಿಯಲ್ಲಿ ಶವಗಳ ನೊಂದಣಿ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

12. **ಎಂ.ಸಿ.ಗ್ಯಾಂಗ್‌ಮ್ಯಾನ್**:– ಇವರು ವಲಯದ ವ್ಯಾಪ್ತಿಯ ಪ್ರದೇಶಗಳಲ್ಲಿ ಸೊಳ್ಳೆ ನಿಯಂತ್ರಣ ಔಷಧಿ ಸಿಂಪಡಣೆಯ ಕಾರ್ಯವನ್ನು ಮಾಡುವುದರ ಮೂಲಕ ಸೊಳ್ಳೆಗಳನ್ನು ನಿಯಂತ್ರಿಸುವ ಕೆಲಸ–ಕಾರ್ಯಗಳನ್ನು ಮಾಡುತ್ತಾರೆ.

13. **ಡಿಗ್ಗರ್ಸ್**:– ಇವರು ಗಾಂಧಿನಗರ ವಲಯ ವ್ಯಾಪ್ತಿಯ ಶ್ರೀರಾಮಪುರ ರುಧ್ರಭೂಮಿಯಲ್ಲಿ ಗೌರವಧನದ ಆಧಾರದ ಮೇಲೆ ಶವ ಊಳುವ ಗುಂಡಿ ತೆಗೆಯುವ ಕಾರ್ಯವನ್ನು ಮಾಡುತ್ತಾರೆ.

**III.ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತಿರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ**:–

ಈ ವಲಯದ ವ್ಯಾಪ್ತಿಗೆ ಬರುವ ಪ್ರದೇಶಗಳ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳು ಮತ್ತು ಕಛೇರಿಗೆ ಸಂಬಂಧಿಸಿದ ಇತರೆ ಕೆಲಸಗಳ ಮೇಲ್ವಿಚಾರಣೆ ಮತ್ತು ಹೋಣೆಗಾರಿಕೆಯಾಗಿದ್ದು, ಮೇಲಾಧಿಕಾರಿಗಳು ತೆಗೆದುಕೊಳ್ಳುವ ತೀರ್ಮಾನ ಮತ್ತು ನೀಡುವ ಸೂಚನೆ ಮೇರೆಗೆ ಕೆಲಸ ನಿರ್ವಹಿಸುವುದು.

**IV.** ಅನ್ವಯಿಸುವುದಿಲ್ಲ.

**V. & VI.** ಅದರ ಕಾರ್ಯಗಳನ್ನು ನೇರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅವರು ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಮಯಗಳು, ಅನುಸೂಚಿಗಳು ಮತ್ತು ದಾಖಲೆಗಳು

1. ಕಛೇರಿಯ ಸಿಬ್ಬಂದಿಯ ಹಾಜರಾತಿ ಪುಸ್ತಕ
2. ಕಛೇರಿಯ ಸಿಬ್ಬಂದಿಯ ವೇತನ ಬಟಾವಡೆಯ ಪುಸ್ತಕ.
3. ಉದ್ದಿಮೆ ಪರವಾನಗಿಗಳ ನೋಂದಣಿ ಪುಸ್ತಕ.
4. ಉದ್ದಿಮೆ ಪರವಾನಗಿಗಳ ಶುಲ್ಕಗಳ ರಸೀದಿ ಪುಸ್ತಕಗಳು.
5. ಉದ್ದಿಮೆ ಪರವಾನಗಿಗಳ ವಸೂಲಾದ ಶುಲ್ಕದ ಮೊತ್ತವನ್ನು ಬ್ಯಾಂಕಿಗೆ ಜಮಾ ಮಾಡಿರುವ ಖಿರ್ದಿ ಪುಸ್ತಕ.
6. ಜನನ ಮತ್ತು ಮರಣ ವಹಿಗಳು.
7. ಜನನ ಮತ್ತು ಮರಣ ವಹಿಗಳಿಂದ ವಸೂಲಾದ ಶುಲ್ಕದ ಮೊತ್ತವನ್ನು ಬ್ಯಾಂಕಿಗೆ ಜಮಾ ಮಾಡಿರುವ ಖಿರ್ದಿ ಪುಸ್ತಕ.
8. ನಗದು ಪುಸ್ತಕಗಳು.
9. ನಾಯಿ ಸಾಕುವ ಪರವಾನಗಿಗಳ ನೋಂದಣಿ ಪುಸ್ತಕ ಮತ್ತು ಇದರಿಂದ ವಸೂಲದಾದ ಮೊತ್ತವನ್ನು ಬ್ಯಾಂಕಿಗೆ ಜಮಾ ಮಾಡಿರುವ ಖಿರ್ದಿ ಪುಸ್ತಕ.
10. ನೀರಿನ ಮಾದರಿಗಳ ಪರೀಕ್ಷಾ ವರದಿಯ ಪುಸ್ತಕ.
11. ಮಾಹಿತಿ ಹಕ್ಕು ಕಾಯ್ದೆ ನೋಂದಣಿ ಪುಸ್ತಕ
12. ಕಛೇರಿಗೆ ಬರುವ ಅರ್ಜಿಗಳ ನೊಂದಣಿ ಪುಸ್ತಕಗಳು.
13. ಟಪಾಲು ಪುಸ್ತಕಗಳು ಮತ್ತು ಪಿ.ಆರ್.ಪುಸ್ತಕಗಳು.
14. ಸ್ಟಾಕ್ ರಿಜಿಸ್ಟರ್ ಮತ್ತು ಇಂಡೆಂಟ್ ರಿಜಿಸ್ಟರ್‌ಗಳು.
15. ಸಾರ್ವಜನಿಕರು ನೀಡುವ ದೂರುಗಳ ವಿವರ.

**VII.&VIII.** ಅನ್ವಯಿಸುವುದಿಲ್ಲ

**XI ಅಧಿಕಾರಿ ಮತ್ತು ಸಿಬ್ಬಂಧಿ ವರ್ಗದವರ ನಿರ್ದೇಶಿಕೆ:-**

| ಕ್ರ. ಸಂ. | ಹೆಸರು ಮತ್ತು ಹುದ್ದೆ | ಕಛೇರಿ ವಿಳಾಸ | ದೂರವಾಣಿ |
|---|---|---|---|
| 1 | ಶ್ರೀ.ವಿ.ಪಿ.ಇಕ್ಕೇರಿ<br>ಜಂಟಿ ಆಯುಕ್ತರು (ಪಶ್ಚಿಮ) | ಪಾಲಿಕೆಯ ಪಶ್ಚಿಮ ವಲಯದ ಕಛೇರಿಗಳು, ಸಂಪಿಗೆ ರಸ್ತೆ, ಬೆಂಗಳೂರು. | 22975648 |
| 2 | ಡಾ॥ಟಿ.ದೇವಕಿ ಉಮೇಶ್<br>ಆರೋಗ್ಯಾಧಿಕಾರಿ (ಪಶ್ಚಿಮ) | ಪಾಲಿಕೆಯ ಪಶ್ಚಿಮ ವಲಯದ ಕಛೇರಿಗಳು, ಸಂಪಿಗೆ ರಸ್ತೆ, ಬೆಂಗಳೂರು. | 22975650 |
| 3 | ಡಾ॥ಎ.ಬಿ.ನಂಜುಂಡೇರಾಜೇ ಅರಸ್<br>ಆರೋಗ್ಯ ವೈದ್ಯಾಧಿಕಾರಿ, (ಗಾಂಧಿನಗರ) ವಲಯ | ಟ್ಯಾಂಕ್‌ಬಂಡ್ ರಸ್ತೆ, ಉಪ್ಪಾರಪೇಟೆ ಪೋಲಿಸ್ ಠಾಣೆ ಹತ್ತಿರ, ಗಾಂಧಿನಗರ, ಬೆಂಗಳೂರು-09 | 22975658 |

**X. ನಿಯಮಾನುಸಾರ ಅಧಿಕಾರಿ/ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ವೇತನದ ವಿವರಗಳು**

| ಕ್ರ. ಸಂ. | ಹುದ್ದೆಯ ಹೆಸರು | ವೇತನ (ರೂ.ಗಳಲ್ಲಿ) | ವೇತನ ಶ್ರೇಣಿ |
|---|---|---|---|
| 1 | ಆರೋಗ್ಯ ವೈದ್ಯಾಧಿಕಾರಿ | 19500.00 | 14050–25050 |
| 2 | ಹಿರಿಯ ಆರೋಗ್ಯ ಪರಿವೀಕ್ಷರು | 12300.00 | 8000–14800 |
| 3 | ಕಿರಿಯ ಆರೋಗ್ಯ ಪರಿವೀಕ್ಷಕರು (ಉಪ ಆರೋಗ್ಯ ಕೇಂದ್ರ) | 14400.00 | 8000–18000 |
| 4 | ಉಪನೋಂದಣೀಗಾರರು | 8600.00 | 5200–8200 |
| 5 | ವ್ಯಾಕ್ಸೀನೇಟರ್ | 13200.00 | 6250–12000 |
| 6 | ಎ.ಎನ್.ಎಂ. | 12000.00 | 8000–14800 |
| 7 | ಡಿ.ಜಿ.ಎಂ. | 8000.00 | 5200–8200 |
| 8 | ಬಿ.ಜಿ.ಎಂ. | 7450.00 | 5200–8200 |
| 9 | ಎಂ.ಸಿ.ಗ್ಯಾಂಗ್‌ಮ್ಯಾನ್ | 9000.00 | 8200–8200 |
| 10 | ಡಿಗ್ಗರ್ಸ್ | 1000.00 (ಗೌರವ ಧನ) | – |

**XI, XII, XIII, XIV, XV ಅನ್ವಯಿಸುವುದಿಲ್ಲ.**

**XVI. ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು ಮತ್ತು ಪದನಾಮ**

| ಕ್ರ. ಸಂ. | ಸಾರ್ವಜನಿಕ ಮಾಹಿತಿ ಅಧಿಕಾರಿ ಹೆಸರು ಮತ್ತು ಪನಾಮ | ಕಛೇರಿ ವಿಳಾಸ | ದೂರವಾಣಿ |
|---|---|---|---|
| 1 | ಡಾ॥ಎ.ಬಿ.ನಂಜುಂಡೇರಾಜೇ ಅರಸ್ ಆರೋಗ್ಯ ವೈದ್ಯಾಧಿಕಾರಿ, (ಗಾಂಧಿನಗರ) ವಲಯ | ಟ್ಯಾಂಕ್‌ಬಂಡ್ ರಸ್ತೆ, ಉಪ್ಪಾರಪೇಟೆ ಪೋಲಿಸ್ ಠಾಣೆ ಹತ್ತಿರ, ಗಾಂಧಿನಗರ, ಬೆಂಗಳೂರು–09 | 22975658 |

**XVII. ಮಾಹಿತಿಯನ್ನು ಪ್ರಕಟಿಸುವುದು ಮತ್ತು ಪ್ರಕಟಣೆಯನ್ನು ಪರಿಷ್ಕರಿಸುವುದು.**

ಆರೋಗ್ಯ ವೈದ್ಯಾಧಿಕಾರಿ ಗಾಂಧಿನಗರ ವಲಯದ ಮಾಹಿತಿಯನ್ನು ಪ್ರಕಟಿಸಿ, ಪ್ರತಿ ವರ್ಷವು ನಮ್ಮ ಕಛೇರಿಯಲ್ಲಿ ಲಭ್ಯವಿರುವಂತ ಮಾಹಿತಿಯನ್ನು ಪ್ರಕಟಿಸಲಾಗುವುದು.

ಆರೋಗ್ಯ ವೈದ್ಯಾಧಿಕಾರಿ,
(ಗಾಂಧಿನಗರ) ವಲಯ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ